## LAW PAPER-III

**Time: 2.00 pm to 5.00 pm** **Max.Marks – 100**
ಸಮಯ: ಮಧ್ಯಾಹ್ನ ೨.೦೦ ರಿಂದ ೫.೦೦ ಗರಿಷ್ಟ ಅಂಕಗಳು – ೧೦೦

**Date: 13th September, 2015**
ದಿನಾಂಕ: ೧೩ನೇ ಸೆಪ್ಟೆಂಬರ್ ೨೦೧೫

**Note:**
**ಸೂಚನೆ:**

(1) Option is given to the candidates to write answers either in English or in Kannada

ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ವಿವೇಚನೆಗೆ ಬಿಡಲಾಗಿದೆ

(2) If there is any discrepancy in the questions in English language and in Kannada language, the questions as framed in English language would prevail.

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ಲೋಪ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ನಿರ್ಣಾಯಕವಾಗುವುದು

(3) Frame the charge against the accused persons for their trial on the basis of the following charge-sheet materials.

ಕೆಳಕಂಡ ದೋಷಾರೋಪಣ ಪಟ್ಟಿ ವಿವರಗಳಿಂದ ಅಧಿವಿಚಾರಣೆಗಾಗಿ ಆರೋಪಿತರ ವಿರುದ್ಧ ದೋಷಾರೋಪಣೆಗಳನ್ನು ಸಿದ್ಧಪಡಿಸಿ

(4) After going through the evidence, of the witnesses of the prosecution, prepare a statement under Section 313 of the Code of Criminal Procedure, 1973.

ಅಭಿನಿಯೋಜನೆ ಸಾಕ್ಷಿಗಳ ಸಾಕ್ಷ್ಯವನ್ನು ಓದಿ ಗಮನಿಸಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಪ್ರಶ್ನಾವಳಿ ಪಟ್ಟಿಯನ್ನು ಸಿದ್ಧಪಡಿಸಿ

(5) Write a considered judgement on the basis of oral and documentary evidence by giving valid and cogent reasons

ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳ ಮೇರೆಗೆ ಸಮಂಜಸ ಹಾಗೂ ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ತೀರ್ಪನ್ನು ಬರೆಯಿರಿ

On 12/8/2014, at 10 AM in front of Panchayat Office at Anekal within the limits of Anekal Police Station, Accused No. 1-Dileep, 2-Pradeep and 3-Sudeep were sitting on a platform and were talking loud, taking the name of Mallika abusing her character. At that time, Sawanth came to a tea stall which is by the side of Panchayat office. He was carrying his spade with him as he wanted to go to his agricultural land. Incidentally, the name of his sister is also Mallika, but she was not the one referred by accused nos. 1,2,3. That time, in the panchayat elections Sudeep-A3 had defeated Sawanth.

Having heard the talk of Accused Nos. 1,2,3 and the name of Mallika, complainant thought that they were referring his sister, he advanced towards the accused and questioned them in a loud voice for commenting on Mallika.

Accused persons talked among themselves against complainant-Sawanth and also abused and pushed him. Accused No. 2 Pradeep snatched the spade from complainant-Sawanth and gave it to Dileep-A1. Sudeep passed a blow with his right fist on the nose of complainant-Sawanth and he started bleeding through nostrils. By that time, CW2-Chandra came to rescue complainant-Sawanth. Accused No. 1 Pradeep hit CW2-Chandra with spade on the right shoulder thereby inflicting severe pain. The accused No. 2 & 3 shouted at complainant-Sawanth and CW2-Chandra that they would wait for an opportunity and end the lives of complainant-Sawanth and CW2-Chandra.

Thus accused No. 1, 2 & 3 in furtherance of common intention committed offence punishable u/s 323, 324, 506 read with Section 34 IPC.

Hence, this final report – charge sheet against the accused 1, 2 & 3 for the offence -punishable under Section 323, 324 and 506 read with Section 34 IPC.

The evidence led by the prosecution to prove the guilt of the accused is as follows:

**PW-1**

**Doctor Sharath**

**Duly sworn on 1/9/2015**

**Examination-in-chief by Assistant Public Prosecutor**

On 12/8/2014 when I was discharging my duty as medical officer in the Government hospital at Anekal. One Sawanth aged 45 years son of Shivaji Rao and Chandra aged 48 years son of Gurumurthy were brought to me by P.C. No. 465 of Anekal Police at 1 PM with the history of assault. I examined both Sawanth and Chandra, they had injuries.

On examination of Sawanth, I found he had suffered bleeding from the nostrils and tenderness was found. The injured was complaining pain in the nasal sectum. I have issued the wound certificate as per Ex. P1 and P1(a) is my signature. The injury found in Ex.P1 is possible through a blow from a fist on the nose.

At 1.15 PM on the same day I have examined Chandra son of Gurumurthy. On examination, I found tenderness on the right shoulder and he was complaining of severe pain. Abrasion was present on the right shoulder measuring 2 x 3 cm. Wound certificate issued by me is as per Ex. P2 and my signature is Ex.P2(a). If a person sustains injury through a hit from a club or a handle of a spade injury mentioned in Ex. P2 is possible. Injuries in Ex.P1 and Ex.P2 were simple in nature.

**Cross-examination by Sri. Arun Kumar, Advocate for accused 1,2,3**

It is possible that a person may suffer injuries similar to those mentioned in Ex. P1 and P2 if he suffers a fall front wards and contacts a hard object with sufficient force.

R.O.I & A.C

**Sawanth son of Shivaji Rao** **PW-2**

**Duly sworn on 1/9/2015.**

**Examination-in-chief – By Assistant Public Prosecutor**

I am an agriculturist. I know the accused Nos. 1 to 3. About one year back one day at about 9.30 to 10.00 PM, I left my home at Anekal along with my spade for carrying out agricultural acts. Today, I see the same spade before the Court as per MO1. On the way, to my agricultural

land at Anekal I have to pass in front of our Panchayat office and I went to a tea stall which is by the side of Anekal Panchayat office.

I saw accused persons 1 to 3 sitting on a platform near Panchayat office and were passing comments against my sister Mallika. I went near them and asked them about their comments. Accused No. 3 hit me through his hand on my nose forcibly and I started bleeding. Chandra came to my help but the accused did not care and were abusing me and also Chandra and accused Dileep hit Chandra with the handle of MO1 on the right side of the neck.

Both of us were screeming. Sudeep threw MO1 and the accused persons went away.

Krishna and Jaffar of our place took us to Police Station and I told the police about the incident: I gave my complaint as per Ex. P3. I have signed it as per Ex. P3(a).

Myself and Chandra were taken to hospital and we were given medical attention by the doctor at Anekal.

Thereafter, Police came to the spot near Panchayat office myself Krishna, Jaffar and Kamble were present.

On the same day, police conducted mahazar and seized the spade MO1 and also the sample soil and blood stained soil. Now I see them as per MO2 and 3. The mahazar conducted by the Police is as per Ex. P4. I ,

by that time secured alternative shirt from the house and gave the blood stained shirt to the Police and now, I see my shirt as per MO4.

**Cross-examination by Sri. Arun Kumar, Advocate for accused 1,2,3**

It is true to suggest, that in the year 2014, I was defeated in the Panchayat election by accused no. 3. It is true to suggest, the area near panchayat office will be crowded at 10 AM in Anekal. It is true to suggest that there is another lady by name Mallika and she resides near Post office at Anekal. I thought that the accused person were commenting on my sister Mallika. My sister resides in our house at Santhepet, Anekal.

At the time of the incident, Krishna and Jaffar were inside the Panchayat office.

It is false to suggest, that due to election rivalry. I have lodged a false report against the accused. It is false to suggest that none of the accused persons abused or hit me or Chandra. It is false to suggest, that no mahazar was conducted and no seizure of MO1 to 4 was made by the Police.

It is false to suggest that Mo1 and 4 do not belong to me.

It is false to suggest that I am deposing false.

R.O.I & A.C

**Chandra son of Gurumurthy** **PW-3**

**Duly sworn on 1/9/2015.**

**Examination-in-chief – By Assistant Public Prosecutor**

I know the accused persons 1 to 3 and the complainant Sawanth. My native place is Chandapur. I am a carpenter. I have a shop in Anekal. About ten to twelve months back at 10 AM near Panchayat office at Anekal, I was going to bring wooden frames from a shop and I saw altercation from the accused person and the complainant there. Meanwhile, one of the accused hit complainant-Sawanth on the nose and it started bleeding and I intervened to rescue complainant-Sawanth. Meanwhile, accused no.1 Pradeep hit me with the spade MO1 on my right shoulder causing injuries. Myself and Sawanthh went to Police Station to lodge complaint and it was lodged by Sawanthh. Thereafter we were taken to hospital and treatment was offered to us. Police have recorded my statement.

**Cross-examination by Sri. Arun Kumar,**
**Advocate for accused 1,2,3**

I do not know whether the spade MO1 was snatched by any of the accused from the hands of complainant-Sawanthh.

I do not know the utterances regarding the name of Mallika.

It is true that in our area we have two women having the name of Mallika.

It is false to suggest that none of the accused hit complainant-Sawanth and I did not intervene. It is false to suggest that either accused no. 1 or any of the accused did not hit me with spade MO1 at the time of incident. It is false to suggest, Police have not recorded my statement.

It is true that the complainant is my relative. It is true that there is a civil dispute between me and accused no. 2 in respect of a vacant site at Attibele. It is false to suggest that none of the accused hit me or Sawanth at any point of time and I am deposing false.

R.O.I & A.C

**Krishna son of Ramanna** **PW-4**

**Duly sworn on 1/9/2015.**

**Examination-in-chief– By Assistant Public Prosecutor**

I know the complainant and accused 1 to 3 about one year back in the morning. I was in my tea shop at Anekal near panchayat office at about 9.00 a.m. I saw accused persons 1 to 3 and the complainant near the panchayat office and their was a galata among them. There was exchange words in loud voice between the complainant and the accused. I was in my tea stall. The complainant was pointing his finger towards the

accused mean while one of the accused hit the complainant with hand on the face. And complainant started bleeding through his nose. Meanwhile CW-2 Chandra came and again complainant and the accused 1 and 2 were exchanging words. Accused No.1 hit CW.2 Chandra with MO 1 on the neck.

Myself and Jaffar went near the complainant and he has asked us to take him to Police Station and we went to Anekal Police station and the complainant lodged the report. In the afternoon Police came near panchayat office at Anekal and conducted mahazar as per exhibit P.4 at the time myself complaint Jaffar present. I have signed the mahazar as per Ex.P4(a) Police seized spade MO 1 from the spot. Jaffar told me that Police also seized the sample soil. Police recorded my statement.

**Cross examination by Sri.Arun Kumar,**
**Advocate for accused 1,2,3**

I do not know whether the galata was in respect of raising the name of Mallika. I do not know for what reason the galata took place. The distance between my tea stall and the place of incident is about 200 ft. There is road in between my tea stall and the place of incident. It is false to suggest that I was not present in my tea stall and I have not seen any galata. It is false to suggest none of the accused hit either the complaint or CW.2 Chandra. It is true that accused No.2 has lodged complaint against me and the case is pending in the court at Anekal. It is true that I

am in good terms with complainant. I have not seen the Police seizing the soil. It is false to suggest that the Police never visited the spot and not conducted the mazar and not seized MO 1 it is false to suggest because of my enemity with accused No.2 and friendship with complainant I am deposing false.

R.O.I & A.C

**Jaffer,**
**Son of Sadiq**

**PW-5**

**Duly sworn on 1/9/2015.**

**Examinaiton-in-chief – By Assistant Public Prosecutor**

I know the accused 1 to 3 and complaint, I am working us Attender in the panchayat office at Anekal. About 8 months back there was a galata near panchayat office at Anekal. I saw complainant and accused persons 1 to 3 exchanging words there after accused. When I went near the spot from the panchayat office accused 1 to 3 had gone away and complainant was bleeding through his nose and CW 2 Chandra was complaining pain in his shoulder. Myself and Krishna were requested by the complainant to take him to Police station. Accordingly we took him to Police station and complainant went inside the Police station. Later in the afternoon Police came near panchayat office and wrote something and collected the spade MO 1 and sample soil and also blood stained soil as

MO 2 and 3. Krishna and complaint were present. The mahazar is as per Ex.P4 and my signature is 4(a).

Police have recorded my statement.

R.O.I & A.C

**Cross examination by Sri.Arun Kumar, Advocate for accused 1,2,3**

I have not seeing any of the accused person hitting the complainant. I do not know the contents of Ex.P4. Police have not read over the contents of the statement recorded from me.

It is false to suggest that i have not seen any galata on the date of incident. It is further false to suggest that Police have not conducted mahazar and not seized MO 1 to 3. I do not know whether complainant produced the shirt MO4 at the time of the Mahazar.

It is false to suggest that I do not know anything about the case but deposing false against the accused out of illwill.

R.O.I & A.C.

**Sharath Kumar,**
**Son of Rajagopal** **PW-6**

**Duly sworn on 1/9/2015**

**Examination-in-chief- By Assistant Public Prosecutor.**

From 1/4/2013 to 2/1/2015, I have worked as Sub-Inspector of Police, Anekal. On 12/8/2014 at 11.30 AM CW1, Sawanth came to our police station and lodged a report which is already marked as Ex.P3 and after going through Ex.P3, I registered FIR against accused no. 1 to 3 in crime no. 346/14 for the offence punishable under section 323, 324, 506 read with section 34 IPC and despatched the complaint and the FIR to the jurisdictional court.

I sent the complainant and PW3 who had accompanied him to the Government hospital, Anekal along with our constable no. 443. The FIR registered by me is as per Ex. P5. At 2 PM on the same day I went to the spot which is near Panchayat office at Anekal and conducted the mahazar as per Ex. P4 in the presence of complainant Krishna, Jaffar and another. During the mahazar I seized MO1 to 3 from the spot. Complainant produced blood stained shirt MO4. On the same day, I recorded the statement of CW 2 who is PW3, CW-4 Krishna tea stall owner, CW-5 Jaffar attender at Panchayat office. On 17/8/2015, I collected the wound certificates Ex. P1 and Ex.2 from the doctor PW1. On the same day I recorded the statements of CW 6 & 7.

On 18.08.2015, after verifying the investigation, I submitted the charge sheet into the jurisdictional court.

**Cross-examination by Sri. Arun Kumar, Advocate for accused 1,2,3**

It is false to suggest that no complaint was lodged before me as per Ex. P3 and there were no grounds to register FIR. It is false to suggest that I have not conducted mahazar as per Ex. P4. It is false to suggest that I have not seized 1 to 5 and not recorded the statements of any witnesses. It is false to suggest that I have not collected any document. It is false to suggest that there were no grounds to submit charge sheet.

R.O.I & A.C

**Particulars of documents relied upon by the prosecution:**

**List of documents :**

| | |
|---|---|
| Ex.P1 – Wound Certificate of P.W.2<br>Ex.P2 - Wound Certificate of P.W.3 | They show that PW2 was injured on his nose and PW3 on the right shoulder. |

They show that P.W.2 and P.W.3 were injured on 14/8/2014. Ex.P1 and Ex.P2 are issued by the Medical Officer PW1.

Ex.P3 – Complaint lodged by P.W.2

Ex.P4 - Spot Mahazar dt. 12/8/2014 with recovery

**List of Material Objects:**

MO1 - spade

MO2 – Sample soil

MO3 - Blood stained soil

MO4 – Blood stained shirt.

ದಿನಾಂಕ 12/8/2014ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಆನೇಕಲ್ ಪಂಚಾಯತ್ ಕಛೇರಿಯ ಮುಂಭಾಗದಲ್ಲಿ ಅಂದರೆ ಆನೇಕಲ್ ಪೋಲೀಸ್ ಠಾಣೆ ಪರಿವ್ಯಾಪ್ತಿಗೆ ಬರುವ ಸ್ಥಳದಲ್ಲಿ ಆರೋಪಿ 1,2 ಮತ್ತು 3 ಗಳಾದ ದಿಲೀಪ್, ಪ್ರದೀಪ್ ಮತ್ತು ಸುದೀಪ್ ಕಟ್ಟೆ ಮೇಲೆ ಕುಳಿತುಕೊಂಡು ಮಲ್ಲಿಕಾಳ ಹೆಸರನ್ನು ತೆಗೆದು ಆಕೆಯ ಬಗ್ಗೆ ದುರ್ಭಾಷೆ ಬಳಸಿ ಮತ್ತು ಆಕೆಯ ನಡತೆಯ ಬಗ್ಗೆ ನಿಂದಿಸುತ್ತಿದ್ದರು. ಆ ಸಮಯದಲ್ಲಿ ಪಿರ್ಯಾದಿ ಸಾವಂತ್, ಪಂಚಾಯತ್ ಕಛೇರಿಯ ಪಕ್ಕದಲ್ಲಿರುವ ಚಹಾ ಅಂಗಡಿಗೆ ಬಂದನು. ಆತನು ತನ್ನ ಜೊತೆಯಲ್ಲಿ ತನ್ನ ಕೃಷಿ ಭೂಮಿಗೆ ಹೋಗುವ ಸಲುವಾಗಿ ಚನಿಕೆಯನ್ನು ತಂದಿದ್ದನು. ಕಾಕತಾಳೀಯವಾಗಿ, ಆತನ ಸಹೋದರಿಯ ಹೆಸರು ಸಹ ಮಲ್ಲಿಕಾ, ಆದರೆ ಸದರಿ ಆರೋಪಿಗಳು ಉಲ್ಲೇಖಿಸುತ್ತಿದ್ದ ಮಲ್ಲಿಕಾಳಲ್ಲ. ಆ ವೇಳೆಗೆ ನಡೆದಿದ್ದ ಪಂಚಾಯತ್ ಚುನಾವಣೆಯಲ್ಲಿ ಆರೋಪಿ 3 ಸುದೀಪ್ ಪಿರ್ಯಾದಿ ಸಾವಂತನನ್ನು ಸೋಲಿಸಿದ್ದನು.

ಆರೋಪಿಗಳು ಆಡುತ್ತಿದ್ದ ಮಾತುಗಳನ್ನು ಕೇಳಿಸಿಕೊಂಡು ತನ್ನ ತಂಗಿಯ ಬಗ್ಗೆ ಆಡಿಕೊಳ್ಳುತ್ತಿದ್ದಾರೆಂದು ಭಾವಿಸಿ ಆರೋಪಿಗಳ ಕಡೆಗೆ ಪಿರ್ಯಾದಿಯು ಮುನ್ನುಗ್ಗಿ ಅವರನ್ನು ಏರು ದನಿಯಲ್ಲಿ ತನ್ನ ತಂಗಿಯ ಬಗ್ಗೆ ಆಡಿಕೊಂಡ ಬಗ್ಗೆ ಪ್ರಶ್ನಿಸಿದನು.

ಆರೋಪಿಗಳು ತಮ್ಮ ತಮ್ಮಲ್ಲೇ ಪಿರ್ಯಾದಿ ಸಾವಂತನ ಬಗ್ಗೆ ಮಾತನಾಡಿಕೊಂಡು ಅವನನ್ನು ಬೈದರು ಮತ್ತು ತಳ್ಳಿದರು. 2ನೇ ಆರೋಪಿ ಪ್ರದೀಪ್ ಸಾವಂತನ ಕೈಯಲ್ಲಿದ್ದ ಚನಿಕೆಯನ್ನು ಕಸಿದುಕೊಂಡು ಅದನ್ನು 1ನೇ ಆರೋಪಿ ದಿಲೀಪನ ಕೈಗೆ ಕೊಟ್ಟನು. 3ನೇ ಆರೋಪಿ ತನ್ನ ಬಲಮುಷ್ಟಿಯಿಂದ ಪಿರ್ಯಾದಿ ಸಾವಂತನ ಮೂಗಿಗೆ ಗುದ್ದಿದ್ದನು. ಆಗ ಅವನ ಮೂಗಿನ ಹೊಳ್ಳೆಯಿಂದ ರಕ್ತ ಬಂದಿತು. ಆ ಸಮಯದಲ್ಲಿ ದೋ. ಸಾ. 2 ಚಂದ್ರುನು ಪಿರ್ಯಾದಿ ಸಾವಂತನನ್ನು ಕಾಪಾಡಲು ಬಂದನು. 1ನೇ ಆರೋಪಿ ಪ್ರದೀಪನು ದೋ. ಸಾ. 2 ಚಂದ್ರುನ ಬಲ ಭುಜದ ಮೇಲೆ ಚನಿಕೆಯಿಂದ ಹೊಡೆದು ತೀವ್ರ ನೋವುಂಟು ಮಾಡಿದನು. ನಂತರ 2 ಮತ್ತು 3 ನೇ ಆರೋಪಿಗಳು ಪಿರ್ಯಾದಿ ಸಾವಂತ್ ಹಾಗೂ ದೋ. ಸಾ. 2 ಚಂದ್ರು ರವರುಗಳ ಬಗ್ಗೆ ಕೂಗಾಡಿ ತಾವು ಅವಕಾಶಕ್ಕಾಗಿ ಕಾದು ಪಿರ್ಯಾದಿ ಸಾವಂತ್ ಹಾಗೂ ದೋ. ಸಾ. 2 ಚಂದ್ರುರವರ ಜೀವಗಳನ್ನು ತೆಗೆಯುವುದಾಗಿ ಹೆದರಿಸಿದರು.

ಆದ್ದರಿಂದ, ಆರೋಪಿ 1, 2 ಮತ್ತು 3 ಗಳು ಏಕೋದ್ದೇಶದಿಂದ ಭಾರತೀಯ ದಂಡ ಸಂಹಿತೆ ಕಲಂ 323, 324, ಮತ್ತು 506 ರ ಅಡಿಯಲ್ಲಿ ಅಪರಾಧಗಳನ್ನು ಎಸಗಿರುತ್ತಾರೆ.

ಆದ್ದರಿಂದ 1 ರಿಂದ 3 ನೇ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, ಮತ್ತು 506 ಸಹವಾಚಕ ಕಲಂ 34ರ ಅಡಿಯಲ್ಲಿ ಅಪರಾಧ ಮಾಡಿದ್ದಕ್ಕಾಗಿ ಈ ಅಂತಿಮ ವರದಿ - ಚಾರ್ಜ್ ಶೀಟ್.

ಅಭಿಯೋಜನೆಯು ಆರೋಪಿಗಳ ವಿರುದ್ಧ ಅಪರಾಧ ಸಾಬೀತು ಪಡಿಸಲು ಕೆಳಕಂಡ ಸಾಕ್ಷ್ಯಗಳನ್ನು ಒದಗಿಸಿದೆ.

**ಡಾಕ್ಟರ್ ಶರತ್** **ಪ್ರಾಸಾ : 1**

**ಕ್ರಮಬದ್ಧವಾಗಿ ಪ್ರಮಾಣ ಮಾಡಿದ ದಿನಾಂಕ 1/9/2015**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರು**

ದಿನಾಂಕ 12/08/2014 ರಂದು ನಾನು ಆನೇಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಗ ಒಬ್ಬ ಸಾವಂತ್ ಬಿನ್ ಶಿವಾಜಿರಾವ್ ವಯಸ್ಸು 45 ವರ್ಷ ಮತ್ತು ಚಂದ್ರು ಬಿನ್ ಗುರುಮೂರ್ತಿ ವಯಸ್ಸು 48 ವರ್ಷ ರವರುಗಳನ್ನು ಆನೇಕಲ್ ಪೋಲಿಸ್ ಪೇದೆ ಸಂಖ್ಯೆ 465 ರವರು ಮಧ್ಯಾನ 1.00 ಘಂಟೆಗೆ ಕರೆತಂದು ನಾನು ಸಾವಂತ್ ಹಾಗೂ ಚಂದ್ರುರವರನ್ನು ಪರಿಕ್ಷಿಸಿದೆನು ಅವರುಗಳಿಗೆ ಗಾಯಗಳಾಗಿದ್ದವು.

ಸಾವಂತ್‌ನನ್ನು ಪರೀಕ್ಷಿಸಿದಾಗ ಅವನ ಮೂಗಿನ ಹೊಳ್ಳೆಗಳಿಂದ ರಕ್ತಸ್ರಾವವಾಗಿದ್ದು ಕಂಡು ಬಂತು ಮತ್ತು ಆ ಭಾಗವು ಮೃಂದುವಾಗಿದುದು ಕಂಡು ಬಂತು. ಗಾಯಾಳು ಮೂಗಿನ ಒಳಗೆ ನೋವನ್ನು ವ್ಯಕ್ತಪಡಿಸಿದನು. ಗಾಯ ಪ್ರಾಮಾಣವನ್ನು ನಾನು ನಿಶಾನೆ ಪಿ.1 ರಂತೆ ಮತ್ತು ಅದರಲ್ಲಿ ನನ್ನ ರುಜು ಪಿ.1(ಎ) ರಂತೆ ನೀಡಿರುತ್ತೇನೆ. ಸದರಿ ಗಾಯವು ಮುಷ್ಟಿಯಿಂದ ಮೂಗಿನ ಮೇಲೆ ಗುದ್ದಿದರೆ ಸಂಭವಿಸಬಹುದು.

ಮಧ್ಯಾಹ್ನ 1.15 ಕ್ಕೆ ನಾನು ಚಂದ್ರ ಬಿನ್ ಗುರುಮೂರ್ತಿಯನ್ನು ಪರೀಕ್ಷೆ ಮಾಡಿದೆ. ಆಗ ನಾನು ಆತನ ಬಲ ಭುಜವನ್ನು ಪರೀಕ್ಷಿಸಿದಾಗ ತೀವ್ರವಾದ ನೋವನ್ನು ವ್ಯಕ್ತಪಡಿಸಿದನು ತರಚು ಗಾಯವು ಎರಡು X ಮೂರು ಸೆಂಟಿಮೀಟರ್‌ಗಳಷ್ಟು ಬಲಬುಜದ ಮೇಲೆ ಆಗಿತ್ತು. ಗಾಯ ಪ್ರಮಾಣ ಪತ್ರವನ್ನು ನಿಶಾನೆ.ಪಿ2 ರಂತೆ ಹಾಗೂ ನನ್ನ ರುಜು ಪಿ.2(ಎ) ರಂತೆ ನೀಡಿದ್ದೇನೆ. ಒಬ್ಬ ವ್ಯಕ್ತಿಯು ದೊಣ್ಣೆ ಅಥವಾ ಚನಿಕೆಯ ಕಾವಿನಿಂದ ಹೊಡೆತಕ್ಕೊಳಗಾದರೆ ನಿಶಾನೆ ಪಿ.2 ರಲ್ಲಿ ಹೇಳಿದ ಗಾಯವು ಆಗಬಹುದು.

ನಿಶಾನೆ ಪಿ.1 ಮತ್ತು 2 ರಲ್ಲಿ ನಮೂದು ಮಾಡಿದ ಗಾಯಗಳು ಸುಲಭ ಸ್ವರೂಪದಾಗಿರುತ್ತವೆ.

ಓ.ಹೇ.ಕೇ. ಮತ್ತು ಸ.ಒ

**ಪಾಟೀ ಸವಾಲು ಆರೋಪಿ 1, 2 ಮತ್ತು 3 ರ ಪರವಾಗಿ ಶ್ರೀ ಅರುಣ್ ಕುಮಾರ್ ವಕೀಲರು.**

ನಿಶಾನೆ ಪಿ.1 ಮತ್ತು 2 ರಲ್ಲಿ ನಮೂದು ಮಾಡಿರುವಂಥಹ ಗಾಯಗಳು ಒಬ್ಬ ವ್ಯಕ್ತಿಯು ಮುಂದೆ ಮುಗ್ಗರಿಸಿ ಸಾಕಷ್ಟು ಬಲದಿಂದ ಘನವಸ್ತುವಿನ ಮೇಲೆ ಬಿದ್ದಾಗ, ಸಂಬವಿಸಬಹುದು.

ಓ.ಹೇ.ಕೇ. ಮತ್ತು ಸ.ಒ

ಪ್ರಾಸಾ ೩ 2

ಸಾವಂತ್ ಬಿನ್ ಶಿವಾಜಿರಾವ್

ಕ್ರಮಬದ್ಧವಾಗಿ ಪ್ರಮಾಣ ಮಾಡಿದ ದಿನಾಂಕ 1/1/2015

ಮುಖ್ಯ ವಿಚಾರಣೆ ೩ ಸಹಾಯ ಸರ್ಕಾರಿ ಅಭಿಯೋಜಕರು

ನಾನು ಕೃಷಿಕ ನನಗೆ ಆರೋಪಿ 1 ರಿಂದ 3 ರವರುಗಳು ಗೊತ್ತು. 1 ವರ್ಷದ ಹಿಂದೆ ಸುಮಾರು 9.30 ರಿಂದ 10.00 ಘಂಟೆ ಸಮಯಕ್ಕೆ ನಾನು ಆನೇಕಲ್‌ನಲ್ಲಿ ನಮ್ಮ ಮನೆಯಿಂದ ಒಂದು ಚನಿಕೆಯೊಂದಿಗೆ ವ್ಯವಸಾಯ ಕಾರ್ಯಗಳಿಗಾಗಿ ಹೊರಟೆ. ಇಂದು ನಾನು ನ್ಯಾಯಾಲಯದಲ್ಲಿ ಮೂ.ಮ 1 ರಂತೆ ಅದನ್ನು ನೋಡುತಿದ್ದೇನೆ. ಆನೇಕಲ್‌ನಲ್ಲಿರುವ ನನ್ನ ವ್ಯವಸಾಯ ಭೂಮಿಗೆ ಹೋಗುವ ಮಾರ್ಗದಲ್ಲಿ ನಮ್ಮ ಪಂಚಾಯಿತಿ ಕಛೇರಿ ಇದೆ. ನಾನು ಪಂಚಾಯಿತಿ ಕಛೇರಿ ಪಕ್ಕದಲ್ಲಿರುವ ಚಹಾ ಅಂಗಡಿಗೆ ಹೋದೆ. 1 ರಿಂದ 3 ಆರೋಪಿಗಳು ಪಂಚಾಯಿತಿ ಕಛೇರಿಯ ಬಳಿ ಇರುವ ಕಟ್ಟೆಯ ಮೇಲೆ ಕುಳಿತುಕೊಂಡು ನನ್ನ ಸಹೋದರಿ ಮಲ್ಲಿಕಾಳ ವಿರುದ್ಧ ಮಾತನಾಡುತ್ತಿದ್ದರು. ನಾನು ಅವರ ಬಳಿ ಹೋಗಿ ಅದನ್ನು ಪ್ರಶ್ನಿಸಿದೆ. 3ನೇ ಆರೋಪಿಯು ತನ್ನ ಕೈಯಿಂದ ನನ್ನ ಮೂಗಿನ ಮೇಲೆ ಜೋರಾಗಿ ಹೊಡೆದನು ನನಗೆ ರಕ್ತ ಸ್ರಾವವಾಯಿತು. ಚಂದ್ರನು ನನ್ನ ಸಹಾಯಕ್ಕೆ ಬಂದನು ಆದರೆ ಆರೋಪಿಗಳು ಅದನು ಎಣಿಸದೆ ನನ್ನನ್ನು ಬೈಯುತ್ತಿದ್ದರು ಮತ್ತು ಆರೋಪಿ ದಿಲೀಪನು ಚಂದ್ರುನಿಗೆ ಮೂ.ಮ 1 ರಿಂದ ಕತ್ತಿನ ಬಲಭಾಗದ ಮೇಲೆ ಹೊಡೆದನು.

ನಾವಿಬ್ಬರು ಕಿರುಚುತಿದ್ದೆವು. ಸುದೀಪನು ಮೂ.ಮ 1 ರಂದು ಬಿಸಾಡಿದನು ಮತ್ತು ಆರೋಪಿಯು ಹೊರಟು ಹೋದರು.

ನಮ್ಮೂರಿನ ಕೃಷ್ಣ ಮತ್ತು ಜಾಫರ್ ರವರು ನನ್ನನ್ನು ಪೋಲಿಸ್ ಠಾಣೆಗೆ ಒಯ್ದರು, ನಾನು ನನ್ನ ಪಿರ್ಯಾದನ್ನು ನಿಶಾನೆ ಪಿ.3 ರಂತೆ ನೀಡಿರುತ್ತೇನೆ ಮತ್ತು ನಿಶಾನೆ ಪಿ.3 (ಎ) ನನ್ನ ರುಜುವಾಗಿರುತ್ತದೆ.

ನನ್ನನ್ನು ಹಾಗೂ ಚಂದ್ರುನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ವ್ಯದ್ಯಕೀಯ ಸೌಲಭ್ಯವನ್ನು ಆನೇಕಲ್ಲಿನಲ್ಲಿ ವೈದ್ಯರು ಒದಗಿಸಿದರು. ನಂತರ ಪೋಲಿಸರು ಪಂಚಾಯಿತಿ

ಕಛೇರಿಯ ಬಳಿ ಸ್ಥಳಕ್ಕೆ ಬಂದರು ನಾನು ಕೃಷ್ಣ ಜಾಫರ್ ಹಾಗೂ ಕಾಂಬ್ಳೆ ರವರುಗಳು ಹಾಜರಿದ್ದೆವು.

ಪೋಲಿಸರು ಪಂಚನಾಮೆಯನ್ನು ಮಾಡಿದರು ಚನಿಕೆಯನ್ನು ಮೂ.ಮ 1 ನ್ನು ಮಾದರಿ ಮಣ್ಣು ಹಾಗೂ ರಕ್ತ ಮಿಶ್ರಿತ ಮಣ್ಣು ಮೂ.ಮ 2 ಮತ್ತು 3 ರಂತೆ ಅಮಾನುಪಡಿಸಿಕೊಂಡರು ಪೋಲಿಸರು ನಡೆಸಿದ ಪಂಚನಾಮೆಯು ನಿಶಾನೆ ಪಿ.4 ರಂತೆ ಇದೆ. ನಾನು ಆಗ ಬೇರೆ ಅಂಗಿಯನ್ನು ಮನೆಯಿಂದ ತರಿಸಿಕೊಂಡು ರಕ್ತಸಿಕ್ತ ವಾದ ಬಟ್ಟೆಯನ್ನು ಪೋಲಿಸರಿಗೆ ಕೊಟ್ಟೆ ಅದನ್ನು ಮೂ.ಮ 4 ರಂತೆ ನಾನು ಈಗ ನೋಡುತ್ತಿದ್ದೇನೆ.

**ಪಾಟೀ ಸವಾಲು ಆರೋಪಿ 1, 2 ಮತ್ತು 3 ರ ಪರವಾಗಿ ಶ್ರೀ ಅರುಣ್ ಕುಮಾರ್ ವಕೀಲರು.**

2014ನೇ ಇಸವಿಯಲ್ಲಿ ಆರೋಪಿ 3 ನನ್ನನ್ನು ಪಂಚಾಯಿತಿ ಚುನಾವಣೆಯಲ್ಲಿ ಸೋಲಿಸಿದ್ದ ಎಂಬ ಸೂಚನೆ ಸರಿ. ಆನೇಕಲ್ ಪಂಚಾಯತಿ ಕಛೇರಿಯ ಬಳಿ ಸ್ಥಳವು ಬೆಳಗ್ಗ 10 ಘಂಟೆಗೆ ಜನ ನಿಬಿಡವಾಗಿರುತ್ತದೆ ಎಂಬ ಸೂಚನೆ ಸರಿ. ಆನೇಕಲಿನ ಅಂಚೆ ಕಛೇರಿ ಬಳಿ ಮಲ್ಲಿಕಾ ಎಂಬ ಹೆಸರಿನ ಇನ್ನೊಬ್ಬ ಹೆಂಗಸು ಇದ್ದಾಳೆ ಎಂಬ ಸೂಚನೆ ಸರಿ. ಆರೋಪಿಗಳು ನನ್ನ ಸೋದರಿ ಮಲ್ಲಿಕಾಳ ಬಗ್ಗೆ ಮಾತನಾಡುತ್ತಿದ್ದರು ಎಂದು ನಾನು ಬಾವಿಸಿದೆ. ನನ್ನ ಸೋದರಿ ಮಲ್ಲಿಕಾ ನನ್ನ ಜೊತೆ ಆನೇಕಲಿನ ಸಂತೆ ಪೇಟೆಯಲ್ಲಿ ವಾಸಿಸುತ್ತಾಳೆ.

ಘಟನೆ ಸಂಭವಿಸಿದಾಗ ಕೃಷ್ಣ ಮತ್ತು ಜಾಫರ್ ರವರುಗಳು ಪಂಚಾಯಿತಿ ಕಛೇರಿಯ ಒಳಗೆ ಇದ್ದರು. ಚುನಾವಣಾ ದ್ವೇಶದಿಂದ ನಾನು ಸುಳ್ಳು ಪಿರ್ಯಾದನ್ನು ಕೋಟಿದ್ದೇನೆ ಎಂಬ ಸೂಚನೆ ಸುಳ್ಳು. ಯಾವ ಆರೋಪಿಗಳು ನನ್ನನ್ನು ಹಾಗೂ ಚಂದ್ರುನನ್ನು ಬ್ಯಯ್ಯಲಿಲ್ಲ ಹಾಗೂ ಹೊಡೆಯಲಿಲ್ಲ ಎಂಬ ಸೂಚನೆ ಸುಳ್ಳು. ಪೋಲಿಸರು ಯಾವುದೇ ಪಂಚನಾಮೆ ಮಾಡಲಿಲ್ಲ ಹಾಗೂ ಮೂ.ಮ 1 ರಿಂದ 4ರನ್ನು ಅಮಾನತುಪಡಿಸಿಕೊಳಲಿಲ್ಲ ಎಂಬ ಸೂಚನೆ ಸುಳ್ಳು. ಮೂ.ಮ 1 ಮತ್ತು 4 ನನ್ನವಲ್ಲ ಎಂಬ ಸೂಚನೆ ಸರಿಯಲ್ಲ.

ನಾನು ಸುಳ್ಳು ಹೇಳುತಿದ್ದೇನೆ ಎಂಬ ಸೂಚನೆ ಸರಿಯಲ್ಲ.

ಪ್ರಾಸಾ : 3

ಚಂದ್ರು ಬಿನ್ ಗುರುಮೂರ್ತಿ

ಕ್ರಮಬದ್ಧವಾಗಿ ಪ್ರಮಾಣ ಮಾಡಿದ ದಿನಾಂಕ 1/9/2015

ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರು

ನನಗೆ ಆರೋಪಿ 1 ರಿಂದ 3 ರವರುಗಳು ಮತ್ತು ಪಿರ್ಯಾದಿ ಸಾವಂತ್ ಗೋತ್ತು. ನನ್ನ ಸ್ವಂತ ಸ್ಥಳ ಚಂದಾಪುರ ನಾನು ಕಾರ್‌ಪೆಂಟರ್ ಕೆಲಸ ಮಾಡುತ್ತಿದ್ದೇನೆ. ನನ್ನ ಅಂಗಡಿ ಆನೇಕಲ್ಲಿನಲಿದೆ ಸುಮಾರು 10 ರಿಂದ 12 ತಿಂಗಳುಗಳ ಹಿಂದೆ ಬೆಳಿಗ್ಗೆ 10 ಘಂಟೆಯ ಸಮಯದಲ್ಲಿ ಆನೇಕಲಿನ ಪಂಚಾಯಿತಿ ಕಛೇರಿ ಬಳಿ ಅಂಗಡಿಗೆ ಮರದ ಫ್ರೇಮುಗಳನ್ನು ತರಲು ಹೋಗುತಿದ್ದೆ. ಆಗ ಆರೋಪಿಗಳು ಹಾಗೂ ಪಿರ್ಯಾದಿ ನಡುವೆ ಗಲಾಟೆ ನೋಡಿದೆ ಆ ಸಮಯದಲ್ಲಿ ಆರೋಪಿಗಳ ಪೈಕಿ ಒಬ್ಬ ಪಿರ್ಯಾದಿ ಸಾವಂತ್‌ನಿಗೆ ಮೂಗಿಗೆ ಹೊಡೆದ ಆಗ ಅವನಿಗೆ ರಕ್ತ ಬಂದಿತು. ನಾನು ಸಾವಂತನನ್ನು ರಕ್ಷಿಸಲು ಮಧ್ಯ ಹೋದೆ. ಆ ಸಮಯದಲ್ಲಿ 1ನೇ ಆರೋ ಪ್ರದೀಪನು ನನಗೆ ಮೂ.ಮ 1 ರಿಂದ ನನ್ನ ಬಲ ಬುಜದ ಮೇಲೆ ಹೊಡೆದು ಗಾಯಗೋಳಿಸಿದ. ನಾನು ಪಿರ್ಯಾದಿ ಸಾವಂತ್ ಪೋಲಿಸ್ ಠಾಣೆಗೆ ಪಿರ್ಯಾದೆ ಕೊಡಲು ಹೋದೆವು. ಸಾವಂತ್ ಪಿರ್ಯಾದೆ ಕೊಟ್ಟ. ಆನಂತರ ನಮ್ಮನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ನಮಗೆ ಚಿಕಿತ್ಸೆ ಕೊಡಲಾಯಿತು ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

ಪಾಟೀ ಸವಾಲು ಆರೋಪಿ 1, 2 ಮತ್ತು 3 ರ ಪರವಾಗಿ ಶ್ರೀ ಅರುಣ್ ಕುಮಾರ್ ವಕೀಲರು.

ಮೂ.ಮ 1 ರನ್ನು ಪಿರ್ಯಾದಿ ಸಾವಂತನಿಂದ ಅರೋಪಿಗಳ ಪೈಕಿ ಯಾರಾದರೂ ಕಸಿದುಕೊಂಡಿದ್ದರೆ ಎಂಬುವುದು ನನಗೆ ಗೋತ್ತಿಲ್ಲ.

ಮಲ್ಲಿಕಾಳ ಬಗ್ಗೆ ಉಚ್ಚರಿಸಿದ ಮಾತುಗಳ ಬಗ್ಗೆ ನನಗೆ ಗೋತ್ತಿಲ್ಲ.

ನಾವು ಇರುವ ಸ್ಥಳದಲ್ಲಿ ಮಲ್ಲಿಕಾ ಎಂಬ ಹೆಸರಿನ ಇಬ್ಬರು ಮಹಿಳೆಯರು ಇದ್ದಾರೆ ಎಂಬ ಸೂಚನೆ ಸರಿ. ಯಾವುದೇ ಆರೋಪಿಗಳು ಪಿರ್ಯಾದಿ ಸಾವಂತರನ್ನೇ ಆಗಲಿ ಹೊಡೆಯಲಿಲ್ಲ ಮತ್ತು ನಾನು ಮಧ್ಯ ಪ್ರವೇಶಿಸಲಿಲ್ಲ ಎಂಬ ಸೂಚನೆ ಸುಳ್ಳು. ಆರೋಪಿ 1 ಮೂ.ಮ 1 ರಿಂದ ಗಂಟನೆಯ ವೇಳೆ ನನ್ನನ್ನು ಹೊಡೆಯಲಿಲ್ಲ ಎಂಬ ಸೂಚನೆ ಸರಿಯಲ್ಲ. ಪೋಲಿಸರು ನನ್ನ

ಹೇಳಿಕೆ ಪಡೆಯಲಿಲ್ಲ ಎಂಬ ಸೂಚನೆ ಸರಿಯಲ್ಲ. ಪಿರ್ಯಾದಿಯು ನನ್ನ ಸಬಂಧಿ ಎನ್ನುವ ಸೂಚನೆ ಸರಿ ನನ್ನ ಹಾಗೂ 2ನೇ ಆರೋಪಿ ನಡುವೆ ಅತ್ತಿಬೆಲೆಯ ಖಾಲಿ ನಿವೇಶನದ ಸಲುವಾಗಿ ಸಿವಿಲ್ ಮೋಕ್ಕದಮೆ ಇದೆ ಎಂಬ ಸೂಚನೆ ನಿಜ. ಯಾವುದೇ ಆರೋಪಿಗಳು ನನಗಾಗಲಿ ಅಥವಾ ಸಾವಂತನಿಗಾಗಲಿ ಯಾವುದೇ ಸಮಯದಲ್ಲಿ ಹೋಡೆಯಲಿಲ್ಲ ಮತ್ತು ನಾನು ಸುಳ್ಳು ಹೇಳುತಿದ್ದೇನೆ ಎಂಬ ಸೂಚನೆಗಳು ಸರಿಯಲ್ಲ.

ಓ.ಹೇ.ಕೇ. ಮತ್ತು ಸ.ಓ

**ಕೃಷ್ಣ ಬಿನ್ ರಾಮಣ್ಣ** **ಪ್ರಾ.ಸಾ.4**

**ಕ್ರಮ ಬದ್ಧವಾಗಿ ಪ್ರಮಾಣಿಸಿದ ದಿನಾಂಕ : 1/9/2015**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರು**

ನನಗೆ ಪಿರ್ಯಾದಿ ಮತ್ತು ಆರೋಪಿಗಳು 1 ರಿಂದ 3 ಗೊತ್ತು. ಒಂದು ವರ್ಷದ ಹಿಂದೆ ಬೆಳಿಗ್ಗೆ 9 ಗಂಟೆಗೆ ನಾನು ಆನೇಕಲ್ಲಿನಲ್ಲಿ ಪಂಚಾಯತ್ ಕಛೇರಿ ಬಳಿ ಇರುವ ನನ್ನ ಚಹಾ ಅಂಗಡಿಯಲ್ಲಿದ್ದೆ. ಆರೋಪಿ 1 ರಿಂದ 3 ರವರು ಮತ್ತು ಈ ಕೇಸಿನ ಪಿರ್ಯಾದಿ ಪಂಚಾಯತ್ ಕಛೇರಿಯ ಬಳಿ ಇದ್ದರು ಅಲ್ಲಿ ಅವರ ಮಧ್ಯೆ ಗಲಾಟೆ ನಡೆಯುತ್ತಿತ್ತು. ಜೋರು ದನಿಯಲ್ಲಿ ಪಿರ್ಯಾದಿ ಮತ್ತು ಆರೋಪಿಗಳ ನಡುವೆ ಮಾತಿನ ಚಕಮಖಿ ಆಯಿತು. ನಾನು ನನ್ನ ಚಹ ಅಗಂಡಿಯಲ್ಲಿದ್ದೆ. ಪಿರ್ಯಾದಿಯು ತನ್ನ ಬೆರಳನ್ನು ಆರೋಪಿಗಳ ಕಡೆ ತೋರಿಸುತ್ತಿದ್ದ ಆರೋಪಿಗಳ ಪೈಕಿ ಒಬ್ಬ ಪಿರ್ಯಾದಿಗೆ ಮುಖದ ಮೇಲೆ ಹೊಡೆದ. ಪಿರ್ಯಾದಿಗೆ ಮೂಗಿನಿಂದ ರಕ್ತ ಬಂತು. ಆಗ ದೋಸ 2 ಚಂದ್ರು ಅಲ್ಲಿಗೆ ಬಂದ ಮತ್ತೆ ಪಿರ್ಯಾದಿ ಮತ್ತು ಆರೋಪಿ 1 ಮತ್ತು 2 ರವರ ಮಧ್ಯೆ ಮಾತಿನ ಚಕಮಕಿ ಆಯಿತು. ಮೊದಲನೆ ಆರೋಪಿ ದೋಸಾ 2 ಚಂದ್ರುನಿಗೆ ಮೂ ಮ 1 ರಿಂದ ಕತ್ತಿನ ಮೇಲೆ ಹೊಡೆದ. ನಾನು ಮತ್ತು ದೋಸ 5 ಜಾಫರ್ ಪಿರ್ಯಾದಿ ಬಳಿ ಹೊದೆವು. ಅವನು ತನ್ನನ್ನು ಪೋಲಿಸ್ ಠಾಣೆಗೆ ಕರೆದೊಯಲು ಹೇಳಿದ. ನಾವು ಆನೇಕಲ್ ಪೋಲಿಸ್ ಠಾಣೆಗೆ ಹೊದೆವು. ಅಲ್ಲಿ ಪಿರ್ಯಾದಿಯು ಒಂದು ಪಿರ್ಯಾದನ್ನು ನೀಡಿದ. ಮಧ್ಯಾಹ್ನ ಪೋಲಿಸರು ಆನೇಕಲ್ ಪಂಚಾಯತ್ ಕಛೇರಿಗೆ ಬಂದರು ಮತ್ತು ನಿಶಾನೆ 4 ರಂತೆ

ಒಂದು ಮಹಜರ್ ಬರೆದರು. ನನ್ನ ರುಜು ನಿಶಾನೆ 4(ಎ). ನಾನು ಪಿರ್ಯಾದಿ ಮತ್ತು ಜಾಫರ್ ಹಾಜರಿದ್ದೆವು. ಪೋಲಿಸರು ಚನಿಕೆ ಮೂ.ಮು. 1 ರನ್ನು ಸ್ಥಳದಿಂದ ಅಮಾನತು ಪಡಿಸಿಕೊಂಡರು. ಮಾದರಿ ಮಣ್ಣನ್ನು ಸಹ ಅಮಾನತ್ತು ಪಡಿಸಿಕೊಂಡರು ಎಂದು ನನಗೆ ಜಾಫರ್ ಹೇಳಿದನು. ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ.

**ಪಾಟೀ ಸವಾಲುಃ-**

**ಆರೋಪಿ 1 ರಿಂದ 3ರ ಪರವಾಗಿ ಶ್ರೀ ಅರುಣ್‌ಕುಮಾರ್ ವಕೀಲರು**

ಮಲ್ಲಿಕಾಳ ಹೆಸರು ಎತ್ತಿದ್ದರಿಂದ ಗಲಾಟೆ ಆದ ಬಗ್ಗೆ ನನಗೆ ಗೊತ್ತಿಲ್ಲ. ಗಲಾಟೆಯ ಕಾರಣ ನನಗೆ ಗೋತ್ತಿಲ್ಲ. ನನ್ನ ಚಹ ಅಂಗಡಿ ಮತ್ತು ಘಟನೆ ಸ್ಥಳಕ್ಕೆ 200 ಅಡಿ ಅಂತರ ಇದೆ. ನನ್ನ ಚಹಾ ಅಂಗಡಿ ಹಾಗೂ ಘಟನೆ ಸ್ಥಳ ನಡುವೆ ಒಂದು ರಸ್ತೆ ಇದೆ.

ನಾನು ನನ್ನ ಚಹ ಅಂಗಡಿಯಲ್ಲಿ ಇರಲಿಲ್ಲ ಮತ್ತು ಯಾವುದೇ ಗಲಾಟೆ ನೋಡಲಿಲ್ಲ ಎಂಬ ಸೂಚನೆ ಸರಿಯಲ್ಲ. ಯಾವುದೇ ಆರೋಪಿಗಳು ಪಿರ್ಯಾದಿಯನ್ನು ಅಥವಾ ದೋಸಾ 2 ಚಂದ್ರನನ್ನು ಹೋಡೆಯಲಿಲ್ಲ ಎಂಬ ಸೂಚನೆ ಸರಿಯಲ್ಲ. ಎರಡನೇ ಆರೋಪಿ ನನ್ನ ವಿರುದ್ದ ಒಂದು ಪಿರ್ಯಾದು ನೀಡಿದ್ದು ಪ್ರಕರಣ ಇನ್ನೂ ಆನೇಕಲ್ ಕೋರ್ಟಿನಲ್ಲಿ ಬಾಕಿ ಉಂಟು ಎಂಬ ಸೂಚನೆ ಸರಿ.

ನಾನು ಪಿರ್ಯಾದಿಯ ಜೊತೆ ಚೆನ್ನಾಗಿದ್ದೇನೆ ಎಂಬ ಸೂಚನೆ ಸರಿ. ಪೋಲಿಸರು ಮಾದರ ಮಣ್ಣನ್ನು ಅಮಾನತು ಪಡಿಸಿಕೊಂಡಿದ್ದು ನಾನು ನೋಡಿಲ್ಲ. ಪೋಲಿಸರು ಸ್ಥಳಕ್ಕೆ ಬರಲಿಲ್ಲ ಹಾಗೂ ಯಾವುದೇ ಮಹಜರ್ ಮಾಡಲಿಲ್ಲ ಮತ್ತು ಮೂ ಮ 1 ರನ್ನು ಅಮಾನತ್ತು ಪಡಿಸಿಕೊಳ್ಳಲಿಲ್ಲ ಎಂಬ ಸೂಚನೆ ಸರಿಯಲ್ಲ.

ನನ್ನ ಹಾಗೂ ಎರಡನೇ ಆರೋಪಿಯ ನಡುವೆ ದ್ವೇಷ ಮತ್ತು ನನ್ನ ಹಾಗೂ ಪಿರ್ಯಾದಿಯ ಜೊತೆ ಸ್ನೇಹದಿಂದ ಸುಳ್ಳು ಹೇಳುತ್ತಿದ್ದೇನೆ ಎಂಬ ಸೂಚನೆ ಸರಿಯಲ್ಲ.

ಓ.ಹೇ.ಕೇ ಮತ್ತು ಸ.ಓ

**ಜಾಫರ್ ಬಿನ್ ಸಾದಿಕ್** **ಪ್ರಾಸಾ-5**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರು**

**ಕ್ರಮಬದ್ಧವಾಗಿ ಪ್ರಾಮಾಣೀಕರಿಸಿದ ದಿನಾಂಕ 1/9/2015**

ನನಗೆ ಆರೋಪಿಗಳು ಮತ್ತು ಪಿರ್ಯಾದಿ ಗೊತ್ತು, ನಾನು ಆನೇಕಲ್ ಪಂಚಾಯತ್ ಕಛೇರಿಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದೇನೆ. ಹೀಗೆ 8 ತಿಂಗಳ ಹಿಂದೆ ಆನೇಕಲ್ ಪಂಚಾಯತ್ ಕಛೇರಿಯ ಬಳಿ ಗಲಾಟೆ ಆಗಿತ್ತು. ನಾನು ಪಿರ್ಯಾದಿ ಹಾಗೂ ಆರೋಪಿ 1 ರಿಂದ 3 ರವರು ಮಾತಿನ ಚಕಮಖಿ ಮಾಡಿಕೊಂಡಿದ್ದು ನೋಡಿದೆ. ನಾನು ಸ್ಥಳದ ಹತ್ತಿರ ಹೋದಾಗ ಆರೋಪಿ 1 ರಿಂದ 3 ಹೊರಟು ಹೋಗಿದ್ದರು. ಪಿರ್ಯಾದಿಯ ಮೂಗಿನಿಂದ ರಕ್ತ ಬರುತ್ತಿತ್ತು. ದೋಸ 2 ಚಂದ್ರನು ಭುಜದ ನೋವು ಎನ್ನುತ್ತಿದ್ದನು. ಪಿರ್ಯಾದಿಯು ಪೋಲಿಸ್ ಠಾಣೆಗೆ ಕರೆದೋಯಲು ನನ್ನನ್ನು ಹಾಗೂ ಕೃಷ್ಣನನ್ನು ವಿನಂತಿಸಿಕೊಂಡ ಆದೇ ರೀತಿ ನಾವು ಅವನನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋದೆವು ಪಿರ್ಯಾದಿಯು ಪೋಲಿಸ್ ಠಾಣೆಯ ಒಳಗೆ ಹೋದ ನಂತರ ಮಧ್ಯಾಹ್ನ ಪೋಲಿಸರು ಪಂಚಾಯತ್ ಕಛೇರಿಯ ಬಂದು ಏನೋ ಬರೆದು ಕೊಂಡರು. ಮೂ ಮ 1 ಮತ್ತು ಮಾದರಿ ಮಣ್ಣು ಮತ್ತು ರಕ್ತ ಮಿಶ್ರಿತ ಮಣ್ಣು ಮೂ ಮ 2 ಮತ್ತು 3 ರಂತೆ ತೆಗೆದುಕೊಂಡರು. ಕೃಷ್ಣ ಮತ್ತು ಪಿರ್ಯಾದಿ ಹಾಜರಿದ್ದರು. ಪಂಚನಾಮೆಯ ನಿಶಾನೆ ಪಿ.4 ರಂತೆ ಇದೆ ಮತ್ತು ನನ್ನ ರುಜು ಪಿ.4(ಬಿ) ಪೋಲಿಸರು ನನ್ನ ಹೇಳಿಕೆಯನ್ನು ಪಡೆದು ಕೊಂಡಿದ್ದಾರೆ

ಓ.ಹೇ.ಕೆ ಮತ್ತು ಸ.ಓ

**ಪಾಟೀ ಸವಾಲುಃ-**

**ಆರೋಪಿ 1 ರಿಂದ 3ರ ಪರವಾಗಿ ಶ್ರೀ ಅರುಣ್‌ಕುಮಾರ್ ವಕೀಲರು**

ನಾನು ಯಾವುದೇ ಆರೋಪಿಗಳು ಪಿರ್ಯಾದೆಯನ್ನ ಹೊಡೆದಿದ್ದು ನೋಡಲಿಲ್ಲ. ನಿಶಾನೆ ಪಿ.4 ರ ವಕ್ಕಣೆ ನನಗೆ ಗೊತ್ತಿಲ್ಲ. ಪೋಲಿಸಿರು ನನ್ನ ಹೇಳಿಕೆಯನ್ನು ನನಗೆ ಓದಿ ಹೇಳಿಲ್ಲ.

ನಾನು ಯಾವುದೇ ಗಲಾಟೆನೋಡಿಲ್ಲ ಎಂಬ ಸೂಚನೆ ಸರಿಯಲ್ಲ. ಪೋಲಿಸರು ಯಾವುದೇ ಮಹಜರ್ ಮಾಡಿಲ್ಲ ಹಾಗೂ ಮೂ ಮ 1 ರಿಂದ 3ರನ್ನು ಅಮಾನತು ಪಡಿಸಿಕೊಂಡಿಲ್ಲ ಎಂಬ ಸೊಚನೆ ಸರಿಯಲ್ಲ. ಪಿರ್ಯಾದಿಯು ಮಹಾಜರ್ ಕಾಲದಲ್ಲಿ ಅಂಗಿ ಮೂ ಮ 4 ಹಾಜರು ಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ.

ಈ ಪ್ರಕರಣ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂಬ ಸೂಚನೆ ಸರಿಯಲ್ಲ.

ಓ.ಹೇ.ಕೆ. ಮತ್ತು ಸ.ಓ.

**ಶರತ್ ಕುಮಾರ್ ಬಿನ್ ರಾಜಗೋಪಾಲ್** **ಪ್ರಾಸಾ 6**

**ಕ್ರಮಬದ್ಧವಾಗಿ ಪ್ರಮಾಣ ಮಾಡಿದ ದಿನಾಂಕ 1/9/2015**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರು**

ತಾ: 01.04.2013 ರಿಂದ 02.01.2015 ರ ವರೆಗೆ ನಾನು ಅನೇಕಲ್ ಪೋಲಿಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. 12.08.2014 ರಂದು ಬೆಳಗ್ಗೆ 11.30 ಘಂಟೆಗೆ ದೋ.ಸಾ.1 ಸಾವಂತ್ ನಮ್ಮ ಪೋಲಿಸ್ ಠಾಣೆಗೆ ಬಂದು ಪಿರ್ಯಾದವನ್ನು ದಾಖಲಿಸಿದನ್ನು ಈಗಾಗಲೇ ಪಿ.3 ಎಂದು ಗುರ್ತಿಸಲಾಗಿದೆ. ನಿಶಾನೆ ಪಿ.3 ಓದಿದನಂತರ ನಾನು ಆರೋಪಿಗಳ ವಿರುದ್ಧ ಗು.ನ್ನೆ. ಸಂಖ್ಯೆ : 366/2014 ರಲ್ಲಿ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಾಲಂ 323, 324, 506 ಸಹವಾಚನ 34 ರ ಅಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದೆ ಮತ್ತು ಪಿರ್ಯಾದು ಹಾಗೂ ಪ್ರಥಮ ವರ್ತಮಾನ ವರದಿಯನ್ನು ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ಕಳುಹಿಸಿದೆ. ಪಿರ್ಯಾದಿ ಮತ್ತು ಅವನೊಂದಿಗೆ ಬಂದಿದ್ದ ಪ್ರಾ.ಸ.3 ರವರನ್ನು ಆನೇಕಲ್ ಸರ್ಕಾರಿ ಆಸ್ಪತ್ರೆಗೆ ನಮ್ಮ ಪೇದೆ ಸಂಖ್ಯೆ 463 ರವರೊಂದಿಗೆ ಕಳುಹಿಸಿದೆ. ನಾನು ದಾಖಲಿಸಿದ ಪ್ರರ್ಥಮ ವರ್ತಮಾನ ವರದಿ ನಿಶಾನೆ ಪಿ.5ರ ಪ್ರಕಾರ ಇದೆ. ಅಂದು ಮಧ್ಯಾನ 2.00 ಘಂಟೆಗೆ ಆನೇಕಲ್ ಪಂಚಾಯತ್ ಕಛೇರಿ ಬಳಿ

ಇರುವ ಸ್ಥಳದಲ್ಲಿ ಪಿರ್ಯಾದಿ ಕೃಷ್ಣ ಜಾಫರ್ ಮತ್ತು ಇನ್ನೊಂಬರ ಸಮಕ್ಷಮ ಪಂಚನಾಮೆ ಜರುಗಿಸಿದೆ ಅದು ನಿಶಾನೆ ಪಿ.4 ರ ಪ್ರಕಾರ ಈಗಾಗಲೇ ಗುರುತಿಸಲಾಗಿದೆ.

ಪಂಚನಾಮೆಯ ಕಾಲಯಕ್ಕೆ ಮೂ.ಮ.1 ರಿಂದ 3 ನ್ನು ಸ್ಥಳದಿಂದ ಅಮಾನತುಪಡಿಸಿಕೊಂಡೆ. ಪಿರ್ಯಾದಿ ರಕ್ತಮಾಯವಾದ ಅಂಗಿಯನ್ನು ಮೂ.ಮ.4 ರಂತೆ ಹಾಜರುಪಡಿಸಿದ. ಆದೇ ದಿನ ಪ್ರಾ.ಸ. 3 ರವರಾದ ದೋ.ಸ.2 ರವರು, ದೋ.ಸ.4 ಕೃಷ್ಣ ಟೀ ಅಂಗಡಿ ಮಾಲೀಕ, ದೋ.ಸ.5 ಜಾಫರ್ ಪಂಚಾಯತ್ ಕಛೇರಿಯ ಪರಿಚಾರಕ ಅವರುಗಳ ಹೇಳಿಕೆಯನ್ನು ಪಡೆದುಕೊಂಡೆ. ತಾ ಃ 17.08.2015 ರಂದು ಈಗಾಗಲೇ ನಿಶಾನೆ ಪಿ.1 ಹಾಗೂ 2 ರಂತೆ ಗುರುತಿಸಲ್ಪಟಿರುವ ಗಾಯ ಪ್ರಮಾಣ ಪತ್ರಗಳನ್ನು ವೈದ್ಯರಾದ ಪ್ರಾ.ಸ.1 ರಿಂದ ಪಡೆದುಕೊಂಡೆ ಹಾಗೂ ದೋ.ಸ. 6 ಮತ್ತು 7 ರವರುಗಳ ಹೇಳಿಕೆಗಳನ್ನು ಪಡೆದುಕೊಂಡೆ.

ತಾಃ 18.08.2015 ರಂದು ತನಿಖೆಯನ್ನು ಪರಿಶೀಲಿಸದ ನಂತರ ದೋಷರೋಪಣ ಪಟ್ಟಿಯನ್ನು ಅಧಿಕಾರ ವ್ಯಾಪ್ತಿವುಳ್ಳ ನ್ಯಾಯಾಲಯಕ್ಕೆ ಸಲ್ಲಿಸಿದೆ.

**ಪಾಟೀ ಸವಾಲು ಆರೋಪಿ 1, 2 ಮತ್ತು 3 ರ ಪರವಾಗಿ ಶ್ರೀ ಅರುಣ್ ಕುಮಾರ್ ವಕೀಲರು.**

ನನ್ನ ಮುಂದೆ ಯಾವುದೇ ಪಿರ್ಯಾದವನ್ನು ನಿಶಾನೆ ಪಿ.3ರ ಪ್ರಕಾರ ಸಲ್ಲಿಸಿಲ್ಲ ಹಾಗೂ ಎಫ್.ಐ.ಆರ್. ದಾಖಲಿಸಲು ಯಾವುದೇ ಕಾರಣಗಳು ಇರಲಿಲ್ಲ ಎಂಬ ಸೂಚನೆ ಸರಿಯಲ್ಲ. ನಾನು ನಿಶಾನೆ ಪಿ.4 ರ ಪ್ರಕಾರ ಪಂಚನಾಮೆ ಮಾಡಿಲ್ಲ ಎಂಬ ಸೂಚನೆ ಸರಿಯಲ್ಲ. ಮೂ.ಮ 1 ರಿಂದ 4ನ್ನು ಅಮಾನತುಪಡಿಸಿಲ್ಲ ಮತ್ತು ಸಾಕ್ಷಿಗಳ ಹೇಳಿಕೆಯನ್ನು ಪಡೆದಿಲ್ಲ ಎಂಬ ಸೂಚನೆ ಸರಿಯಲ್ಲ. ನಾನು ಯಾವುದೇ ದಾಖಲಾತಿಗಳನ್ನು ಪಡೆದಿಲ್ಲ ಎಂಬ ಸೂಚನೆ ಸರಿಯಲ್ಲ. ದೋಶಾರೋಪಣೆ ಪಟ್ಟಿಯನ್ನು ಸಲ್ಲಿಸಲು ಯಾವುದೇ ಕಾರಣಗಳು ಇರಲಿಲ್ಲ ಎಂಬ ಸೂಚನೆ ಸರಿಯಲ್ಲ.

ಓ.ಹೇ.ಕೇ. ಮತ್ತು ಸ.ಓ

**ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷ್ಯ ಹಾಗೂ ದಾಖಲೆಗಳು**

ನಿಶಾನೆ ಪಿ.1 ಪ್ರಾ.ಸಾ.2 ರವರ ಗಾಯ ಪ್ರಮಾಣ ಪತ್ರ

ನಿಶಾನೆ ಪಿ.2 ಪ್ರಾ.ಸಾ.3 ರವರ ಗಾಯ ಪ್ರಮಾಣ ಪತ್ರ

(ಸದರಿ ದಾಖಲೆಗಳು ಮೇಲೆ ಹೇಳಿದ ವ್ಯಕ್ತಿಗಳು ತಾಃ 14.08.2014 ರಂದು ಗಾಯಗೊಂಡಿದ್ದರು ಎಂಬುದನ್ನು ತೋರಿಸುತ್ತವೆ. ಪ್ರಾ.ಸಾ.2 ರವರ ಮೂಗು ಗಾಯಗೊಂಡಿತ್ತು ಮತ್ತು ಪ್ರಾ.ಸಾ.3 ರವರ ಬಲ ಬುಜದ ಮೇಲೆ ಗಾಯಗೊಂಡಿದ್ದರು.) ನಿಶಾನೆ ಪಿ.1 ಮತ್ತು 2 ಗಳನ್ನು ಪ್ರಾ.ಸಾ.1 ವೈದ್ಯಾಧಿಕಾರಿಗಳು ನೀಡಿರುತ್ತಾರೆ.

ನಿಶಾನೆ ಪಿ.3 ಃ ಪ್ರ.ಸಾ.2 ರವರು ದಾಖಲಿಸಿದ ಪಿರ್ಯಾದು

ನಿಶಾನೆ ಪಿ.4 ಃ ದಿನಾಂಕ 14.08.2014 ರ ಸ್ಥಳ ಪಂಚನಾಮೆ ಮತ್ತು ವಸೂಲು

<u>ಮುದ್ದೆ ಮಾಲುಗಳ ಪಟ್ಟಿ</u>

ಮೂ.ಮ. 1 ಚನಿಕೆ,

ಮೂ.ಮ. 2 ಮತ್ತು 3 ಮಾದರಿ ಮಣ್ಣು ಮತ್ತು ರಕ್ತ ಮಿಶ್ರಿತ ಮಣ್ಣು

ಮೂ.ಮ. 4 ರಕ್ತಮಯವಾದ ಅಂಗಿ.